ಒಂದು ನೋಟ್ ಕೊಟ್ಟ ಮೇಲೆ ನಮಗೆ ಪ್ಲಾನ್ ಈ ತರಹ ಕಷ್ಟ ಇದೆ because we have to explain the position, reality ಅಡಗಿಸಬೇಕಾದಂಥ ಅವಶ್ಯಕತೆ ಇಲ್ಲ. State Planning Board consisting of eminent economists.

ಅವರು ಏನು ಹೇಳಿದರು ಅಂದರೆ ನೀವು ಖಂಡಿತವಾಗಿ ಪ್ಲಾನ್ ಅನ್ನು ಕಟ್ ಮಾಡುವಂತಹ ಅವಶ್ಯಕತೆ ಇಲ್ಲ.

ಆ ಪ್ಲಾನ್ನನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಹೇಳಿ ಶ್ರೀ ಪಿ.ಆರ್. ನಾಯಕ್ರವರ ಅಧ್ಯಕ್ಷತೆಯಲ್ಲಿ ಒಂದು ಸಬ್ ಕಮಿಟಿಯನ್ನು ಮಾಡಿ, ಅವರು ಸದ್ಯದಲ್ಲಿಯೇ ವರದಿ ಕೊಡುವವರಿದ್ದಾರೆ. ನಾವು ಪ್ಲಾನ್ ಕಟ್ ಮಾಡಬೇಕಾದಂತಹ ಅವಶ್ಯಕತೆಯಲ್ಲಿ ಕೆಲವು ಸಜೆಷನ್ಗಳನ್ನು ಕೊಟ್ಟಮೇಲೆ, ಆ ಸಬ್ ಕಮಿಟಿ ಕೂಡ ನಾಯಕ್ರವರ ಅಧ್ಯಕ್ಷತೆಯಲ್ಲಿ ಒಂದು ವರದಿ ಕೊಡುತ್ತಿದೆ. ಅದು ಆದಮೇಲೆ ಅವರ ಕೆಲವು ಸೂಚನೆಗಳಿಗನುಗುಣವಾಗಿ ನಾನೂ ಕೂಡ ಎರಡು ಸಾರಿ ಎಲ್ಲಾ ರೆವಿನ್ಯೂ ಅರ್ನಿಂಗ್ ಡಿಪಾರ್ಟ್ಮೆಂಟನ್ನು 3-4 ಗಂಟೆಗಳ ಕಾಲ ರೆವ್ಯೂ ಮಾಡಿದಮೇಲೆ ನನಗೆ ಬಂದಂತಹ ಆತ್ಮ ವಿಶ್ವಾಸದಿಂದ ಹೇಳುತ್ತಿದ್ದೇನೆ, ಬೇಕಾದಂತಹ ಕೆಲವು ವಿಚಾರಗಳನ್ನು ನಾವು ನಿರ್ಣಯ ಕೂಡ ತೆಗೆದುಕೊಂಡಿದ್ದೇವೆ. ಕಠಿಣವಾದಂತಹ ನಿರ್ಣಯವನ್ನು ಕೆಲವು ಕಡೆ ತೆಗೆದುಕೊಳ್ಳಬೇಕಾಗಿ ಬಂದಿತು. ಅದನ್ನು ತೆಗೆದುಕೊಂಡಿದ್ದೇವೆ. ಅದರ ಆಧಾರದ ಮೇಲೆ ಹೇಳುತ್ತಿದ್ದೇನೆ, 80 ಪರ್ಸೆಂಟ್ ಪರ್ಫಾರ್ಮ್ ಪ್ಲಾನ್ ಮಾಡಬಹುದು ಎಂದು ಯಾವ ಅಭಿಪ್ರಾಯ ನಮಗೆ ಇತ್ತು ಅದು ಖಂಡಿತವಾಗಿಯೂ ಕೂಡ 80 ಪರ್ಸೆಂಟ್ ಪರ್ಫಾರ್ಮೆನ್ಸ್ಗಿಂತ ಮೇಲೆ ಕೊಂಡು ಹೋಗಿದ್ದೇವೆ.

ಚನ್ನಪಟ್ಟಣಕ್ಕೆ ಸಂಚಾರಿ ಆರಕ್ಷಕ ಠಾಣೆ ಮಂಜೂರಾತಿ.

72 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ನಗರಕ್ಕೆ ಟ್ರಾಫಿಕ್ ಪೊಲೀಸ್ ಠಾಣೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿ 3 ವರ್ಷಗಳಿಂದ ಬಾಕಿ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಮಂಜೂರಾತಿ ನೀಡದಿರಲು ಕಾರಣಗಳೇನು ಮತ್ತು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಶ್ರೀ ಸಾದತ್ ಆಲಿ ಖಾನ್ : ಮಾನ್ಯ ಸಭಾಪತಿಯವರೇ, ಚನ್ನಪಟ್ಟಣಕ್ಕೆ ಟ್ರಾಫಿಕ್ ಪೊಲೀಸ್ ಸ್ಟೇಷನ್ ಬೇಕಾಗಿರುವುದು ಸರ್ಕಾರಕ್ಕೆ ಪ್ರಪೋಸಲ್ ಇಲ್ಲ ಎಂದು ನಮಗೆ ರಿಪ್ಲೈ ಬಂದಿದೆ. ಅದಕ್ಕೆ during the last 3 years, I am asking for the traffic police station.

ಅದು ಏತಕ್ಕೆ ಎಂದರೆ ನಮ್ಮ ಬಾರ್ಡರ್ ರಾಮನಗರ ಹನುಮಂತರಾಯನ ಗುಡಿಯಿಂದ ಮದ್ದೂರ್ವರೆಗೂ 20 ಕಿಲೋಮೀಟರ್ ಇದೆ. 20 ಕಿಲೋಮೀಟರ್ನಲ್ಲಿ ಎರಡು ಕಡೆಯಾ ಡೆವಲಪ್ಮೆಂಟ್ ಆಗಿಬಿಟ್ಟಿದೆ. ಹೀಗಾಗಿ ನಮ್ಮ ರಾಮನಗರ ಬಾರ್ಡರ್ನ್ನಿಂದ ಮದ್ದೂರ್ವರೆಗೆ ಟ್ರಾಫಿಕ್ ಜಾಸ್ತಿಯಾಗಿ ತಿಂಗಳಿಗೆ 10 ಆಕ್ಸಿಡೆಂಟ್ಸ್ ಆಗುತ್ತದೆ. ನಮ್ಮ

ಡೆಪ್ಯೂಟಿ ಚೀಫ್ ಮಿನಿಷ್ಟರ್ ಹಿಂದೆ ಹೇಳಿದ್ದರು. ಅದು ಬಸ್ಸಗಳು ಯಾವ ತರಹ ಹೋಗುತ್ತದೆ ಎಂದರೆ ನೋಡುವುದಕ್ಕೆ ಆಗುವುದಿಲ್ಲ. ಈಗ ನಮ್ಮಲ್ಲಿ ಟ್ರಾಫಿಕ್ ಎಷ್ಟು ಜಾಸ್ತಿಯಾಗಿದೆ ಎಂದರೆ ನೂರು ಪರ್ಸೆಂಟ್ ಜಾಸ್ತಿಯಾಗಿದೆ. The traffic police Station is essential for Channapatna.

ಅದಕ್ಕೆ ಈಗ ಹೊಸದಾಗಿ ಸ್ಕಾಂಕ್ಷನ್ ಮಾಡುತ್ತಿದ್ದಾರೆ, ಆದ್ದರಿಂದ ಅದನ್ನು ಕನ್ಸಿಡರ್ ಮಾಡಿ ಎಂದು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸಭಾಪತಿಯವರೇ, ಈಗ ಚನ್ನಪಟ್ಟಣ ನಗರದಲ್ಲಿ 2 ಪೋಲೀಸ್ ಸ್ಟೇಷನ್ ಇದೆ. ಆ ಎರಡರಲ್ಲಿ ಒಂದು ನಗರ ಮತ್ತು ಚನ್ನಪಟ್ಟಣ ಪೂರ್ವದಲ್ಲಿ ಇದೆ. ಈ ಠಾಣೆಗಳಿಗೆ ಒಟ್ಟು 3 ಎಸ್ಐಗಳು, 3 ಎಎಸ್ಐಗಳು, 20 ಹೆಚ್ಸಿಗಳು 68 ಪಿಸಿಗಳ ಬಲ ಕೂಡ ಜಾಸ್ತಿ ಮಾಡಿದ್ದೇವೆ. ಏಕೆಂದರೆ ಹೆಚ್ಚು ಸಂಖ್ಯೆ ಇರಬೇಕು ಎಂದು ಮಾಡಿದ್ದೇವೆ. ನಂತರ 94-95ನೇ ಸಾಲಿನಲ್ಲಿ ಕೂಡ ಪುನಃ ಒಂದು ಎಸ್ಐ, ಎಎಸ್ಐ ಹುದ್ದೆಗಳನ್ನು ಕೂಡ ಚನ್ನಪಟ್ಟಣನಗರದ ಪೋಲೀಸ್ ಸ್ಟೇಷನ್‌ಗೆ ಕೊಡುತ್ತಿದ್ದೇವೆ. ಎಂದರೆ ಈ ಪೋಲೀಸ್ ಸ್ಟೇಷನ್ನೆ ಏನು ಸಿಬ್ಬಂದಿ ಕೊರತೆ ಇತ್ತು ಅದನ್ನು ನಾವು ನೀಗಿಸಿಬಿಟ್ಟಿದ್ದೇವೆ. ಆದುದರಿಂದ ನಮ್ಮ ಪೋಲೀಸ್ ಇಲಾಖೆ ಅಭಿಪ್ರಾಯವನ್ನು ಕೇಳಿದರೆ ಸಮರ್ಪಕವಾಗಿ ಇವರು ನಿರ್ವಹಿಸಿದ್ದಾರೆ ಎಂದು ಹೇಳುತ್ತಾರೆ. ಅನೇಕ ಬಾರಿ ತಾವು ನನ್ನ ಜೊತೆಯಲ್ಲಿ ಮಾತನಾಡಿದ್ದೀರಿ. ಮತ್ತು ಆಕ್ಸಿಡೆಂಟ್ಸ್ ಬಹಳ ಆಗುತ್ತಿರುವುದರಿಂದ 94-95ನೇ ಸಾಲಿನಲ್ಲಿ ಒಂದು ಸಂಚಾರಿ ಘಟಕವನ್ನು ನಾವು ಮಾಡುತ್ತೇವೆ.

ಬೆಂಗಳೂರಿನಲ್ಲಿರುವ ಸಾರಾಯಿ ಅಂಗಡಿಗಳು

14 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆದರಲ್ಲೂ ವಿಶೇಷವಾಗಿ ಕಿಕ್ಕಿರಿದ ಜನಸಂದಣಿ ಪ್ರದೇಶಗಳಲ್ಲಿ ಪರವಾನಿಗೆ ಹೊಂದಿದ ಸಾರಾಯಿ ಅಂಗಡಿಗಳನ್ನು ಸ್ಥಾಪಿಸಿರುವುದು ಹಾಗೂ ಖಾಸಗಿ ಆಸ್ತಿಗಳಲ್ಲಿ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ನಿವಾಸಗಳ ಪ್ರದೇಶಗಳಲ್ಲಿ, ವರ್ಕ್‌ಶಾಪ್, ವಿದ್ಯಾಸಂಸ್ಥೆಗಳು, ಆಸ್ಪತ್ರೆಗಳು, ಕೊಳಚೆ ಪ್ರದೇಶಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರದೇಶಗಳು ಸರ್ಕಾರಿ ಹಾಗೂ ಅರೆ ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆಗಳ ಕಛೇರಿಗಳ ಸಮೀಪದ ಸ್ಥಳಗಳಲ್ಲಿ ಅಂತಹ ಅಂಗಡಿಗಳನ್ನು ಸ್ಥಾಪಿಸುವಾಗ ಅನೇಕ ಪ್ರಕರಣಗಳಲ್ಲಿ ಸರ್ಕಾರಿ ನಿಯಮಾವಳಿಗಳನ್ನು ಉಲ್ಲಂಘಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಅಂತಹ ಅಂಗಡಿಗಳನ್ನು ಗುರುತಿಸಿ ನಿಯಮಾವಳಿಯ ಪರಿಮಿತಿಯೊಳಗೆ ಬರುವ ಸ್ಥಳಗಳಿಗೆ ಸ್ಥಳಾಂತರಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಈ) ಸ್ಥಳೀಯ ಜನತೆಗೆ ಆಗುವ ಅನಾನುಕೂಲ ಹಾಗೂ ತೊಂದರೆಗಳನ್ನು ತಡೆಗಟ್ಟುವುದಕ್ಕಾಗಿ ಅಬಕಾರಿ ಗುತ್ತಿಗೆದಾರರಿಗಾಗಿ, ಮಾರಾಟಗಾರರಿಗಾಗಿ ರಾಜ್ಯ ಸರ್ಕಾರದ ಹಾಗೂ ಪುರಸಭೆಗಳ ಹಾಗೂ ಸ್ಥಳೀಯ ಪ್ರಾಧಿಕಾರಗಳ ಜಾಗಗಳಲ್ಲಿ ಅಂತಹ ಅಂಗಡಿಗಳಿಗೆ ಪರವಾನಿಗೆ ನೀಡಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :